
# ಬೆಳಕಿನ ಸಂಚಲನ

ಸಂ 3, ಸಂ 3 ಜುಲೈ 2015



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

### ಗುರೂಜಿ ಕೃಷ್ಣಾನಂದ

(ಅವರ 18 ಮಾರ್ಚ್ 2012ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ನಾವು ಆಧ್ಯಾತ್ಮಿಕ ವಾಸ್ತವಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾ ಹೋದಂತೆ, ನಮ್ಮ ಇಂದಿನ ಹಾಗೂ ಭವಿಷ್ಯತ್ತಿನ ಆಗು ಹೋಗುಗಳ ಅರಿವಾದಂತೆ, ಧರ್ಮಪ್ರಜ್ಞೆಯುಳ್ಳ ವ್ಯಕ್ತಿಯು, ಈ ಪ್ರಪಂಚದಲ್ಲಿ ನಾನೇನು ಮಾಡುತ್ತಿದ್ದೇನೆ ಎಂದು ಸ್ವಾಭಾವಿಕವಾಗಿ ಯೋಚಿಸುತ್ತಾನೆ. ನಾವು ಕೆಲಸ ಮಾಡುತ್ತಿರುವ, ಜೀವಿಸುತ್ತಿರುವ ಈ ಪ್ರಪಂಚದಲ್ಲಿ ಅನ್ಯಾಯ, ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಈ ಪ್ರಪಂಚ ನಮಗೆ ತಕ್ಕುದಲ್ಲವೆಂದು ಸಹಜವಾಗಿಯೇ ನಂಬುತ್ತೇವೆ. ನಾವು ಬೇರೊಂದು ಜಗತ್ತಿನಲ್ಲಿ ಬದುಕುತ್ತಿದ್ದೇವೆ ಅನ್ನಿಸುತ್ತದೆ. ಪ್ರತಿಯೊಬ್ಬರಿಗೂ ಈ ರೀತಿಯಾಗಿ ಅನ್ನಿಸುವುದಿಲ್ಲ ಆದರೆ ವಿಚಾರಶೀಲರು, ಧರ್ಮಪ್ರಜ್ಞೆಯುಳ್ಳವರಿಗೆ ಈ ರೀತಿ ಅನ್ನಿಸುತ್ತದೆ. ಅಂತಹ ಸಮಯದಲ್ಲಿ ನಾವೇನು ಮಾಡಬೇಕೆಂದು ತಿಳಿಯಲು ಇಚ್ಛಿಸುತ್ತೇವೆ. ಲೈಟ್ ಚಾನಲ್ ಮಾಡುವುದನ್ನು ಬಿಟ್ಟರೆ ಮತ್ತೇನನ್ನೂ ಮಾಡಲು ಸಾಧ್ಯವಿಲ್ಲ.

ಈ ಪ್ರಪಂಚದಿಂದ ನಾವು ಹೊರಗೆ ಬರಲು ಸಾಧ್ಯವಿಲ್ಲ. ನಮ್ಮ ಕೆಲಸಗಳನ್ನು ಬಿಡಲು ಸಾಧ್ಯವಿಲ್ಲ. ನಮ್ಮ ಕೆಲಸಗಳನ್ನು ಬಿಟ್ಟರೂ ಕೂಡ ನಮ್ಮ ನೆರೆಹೊರೆಯವರೊಂದಿಗೆ ನಾವು ಜೀವಿಸಲೇ ಬೇಕು. ನಾವು ಈ ಪ್ರಪಂಚದಲ್ಲಿ ಬದುಕಲೇ ಬೇಕು. ಅದೇ ಒಂದು ಸವಾಲು. ಈ ಪ್ರಪಂಚ ಅಪರಿಪೂರ್ಣವಾಗಿದೆ. ನಾವೂ ಸಹ ಅಪರಿಪೂರ್ಣರೇ. ಈ ಪ್ರಪಂಚದಲ್ಲಿ ಬದುಕುವುದಕ್ಕಾಗಿ ನಾವು ನಮ್ಮದೇ ಆದ ರೀತಿಗಳನ್ನು ಯೋಜಿಸಬೇಕಾಗಿದೆ. ಅಗಾಧವಾದ ಪ್ರೀತಿ ಮತ್ತು ಸಹನೆಯಿಂದ ಕೂಡಿರುವವರಾಗಬೇಕಾಗಿದೆ. ಸಹಿಸಿಕೊಳ್ಳಬೇಕೆಂದಿಲ್ಲ. ಆದರೆ ನಾವು ಯಾವಾಗಲೂ ಹೋರಾಡಲು ಸಾಧ್ಯವಿಲ್ಲ. ಹೋರಾಡಲು ಸಾಧ್ಯವಿಲ್ಲದಿರುವಾಗ ನಾವು ಸಹಿಸಿಕೊಳ್ಳಲೇಬೇಕು. ಅಂತಹ ಸಮಯದಲ್ಲಿ ನಾವು ರಾಜಿ ಮಾಡಿಕೊಳ್ಳುತ್ತಿದ್ದೇವೆಯೇ? ಹೌದು, ರಾಜಿ ಮಾಡಿಕೊಳ್ಳಲೇಬೇಕು. ಅನ್ಯ ದಾರಿ ಇಲ್ಲ.

## ಘಟನಾವಳಿಗಳು

### ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ

ನಮ್ಮ ಕಾರ್ಯಕರ್ತರು ಎಲ್ಲಿಗೇ ಹೋದರೂ ಲೈಟ್ ಚಾನಲಿಂಗ್‌ಅನ್ನು ಕಲಿಸಿಕೊಡುವ ತಮ್ಮ ಕೆಲಸವನ್ನು ಕೊಂಡೊಯ್ಯುತ್ತಾರೆ. ನಮ್ಮ ಕಾರ್ಯಕರ್ತರಲ್ಲೊಬ್ಬರು ರಾಜಸ್ಥಾನಕ್ಕೆ ವರ್ಗಾವಣೆಯಾಗಿ ಅಲ್ಲಿನ ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಹೇಳಿಕೊಡುವುದನ್ನು ಪ್ರಾರಂಭಿಸಿದರು.

ಜೂನ್ ತಿಂಗಳಲ್ಲಿ ನಮ್ಮ ಕಾರ್ಯಕರ್ತರು 200 ಶಾಲೆಗಳಿಗೆ ಭೇಟಿ ನೀಡಿದರು ಹಾಗೂ 70,000 ಮಕ್ಕಳು ಅವರು ನಡೆಸಿದ ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ಭಾಗವಹಿಸಿದರು. ಇದಲ್ಲದೆ, 1200 ಶಾಲೆಗಳಲ್ಲಿನ 5 ಲಕ್ಷಕ್ಕೂ ಹೆಚ್ಚು ಮಕ್ಕಳು ತಮ್ಮ ಶಾಲೆಗಳಲ್ಲಿ ನಿಯತವಾಗಿ ಚಾನಲ್ ಮಾಡುತ್ತಿದ್ದಾರೆ.

ಇಲ್ಲಿಯವರೆಗೆ ಸುಮಾರು 4900 ಶಾಲೆಗಳ 27 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ನಾವು ಲೈಟ್ ಚಾನಲಿಂಗ್ ಮಾಡುವುದನ್ನು ಕಲಿಸಿಕೊಟ್ಟಿದ್ದೇವೆ.

## ಬೆಳಕಿನ ಕ್ರಿಯಾಶಕ್ತಿ

### ಮನೋಜ್ ಚೋಪ್ರ; ಅನು: ಶ್ರೀದೇವಿ

ಬೇಸಿಗೆ ರಜೆ ನಂತರ ದಿನಕಳೆದಂತೆ, ಲೈಟ್ ಚಾನಲಿಂಗ್ ಕಾರ್ಯ ಚುರುಕುಗೊಳ್ಳುತ್ತಿದೆ. ಪ್ರತಿ ವರ್ಷದಂತೆ ಶಾಲೆಗಳಲ್ಲಿ ನಮ್ಮ ಕಾರ್ಯಕರ್ತರಿಗೆ ವಿಶೇಷವಾದ ಸ್ವಾಗತ ದೊರೆಯುತ್ತಿದೆ. ಸೆಷನ್‌ಗಳನ್ನು ಬಹಳವಾಗಿ ಪ್ರೀತಿಸುವ ಮಕ್ಕಳು ಅದಕ್ಕಾಗಿ ಕಾಯುತ್ತಿದ್ದರು. ಆ ಮಕ್ಕಳಂತೆ ನಮ್ಮ ಕಾರ್ಯಕರ್ತರೂ ಕೂಡ ತಮಗೆ ಬಹಳ ಪ್ರಿಯವಾದ ಲೈಟ್ ಚಾನಲಿಂಗ್ ಕೆಲಸವನ್ನು ಪ್ರಾರಂಭಿಸುವುದಕ್ಕಾಗಿ, ಶಾಲೆಗಳು ತೆರೆಯುವುದನ್ನೇ ಕಾಯುತ್ತಿದ್ದರು. ಲೈಟ್ ಚಾನಲಿಂಗ್ ಬಗ್ಗೆ ಮಕ್ಕಳಿಗಿರುವ ಪ್ರೀತಿ, ಹೆಚ್ಚು ಹೆಚ್ಚು ಶಾಲೆಗಳಿಗೆ ಭೇಟಿ ನೀಡುವಂತೆ ನಮ್ಮ ಕಾರ್ಯಕರ್ತರನ್ನು ಸ್ಫೂರ್ತಿಗೊಳಿಸುತ್ತದೆ.

ಪ್ರಪಂಚ ಅದೇ ರೀತಿಯಲ್ಲಿ ಕಾಣುತ್ತಿರಬಹುದು; ಬದಲಾವಣೆಗಳು ಈ ಮಟ್ಟದಲ್ಲಿ ಕಾಣದೇ ಇರಬಹುದು, ಆದರೆ ಬದಲಾವಣೆಗಳು ಬೇರೊಂದು ಮಟ್ಟದಲ್ಲಿ ಆಗುತ್ತಿವೆ ಹಾಗೂ ಆ ಬದಲಾವಣೆಗಳು ಕೊನೆಗೆ ನಿಧಾನವಾಗಿ ನಮ್ಮ ಮಟ್ಟಕ್ಕೆ ಇಳಿದು ಬರುತ್ತವೆ ಎಂದು ನನಗನ್ನಿಸುತ್ತದೆ. ನಿಯತವಾಗಿ ಲೈಟ್ ಚಾನಲ್ ಮಾಡುವುದರ ಮೂಲಕ ನಮ್ಮ ಪಾಲಿನ ಕೆಲಸವನ್ನು ಮುಂದುವರೆಸೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890,
38ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಶ್ರೀಮತಿ ಶುಭ ಎಸ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೇಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರಿನ ರಾಜಾಜಿನಗರದ ಶಾಲೆಯೊಂದರಲ್ಲಿ ಪೋಷಕರು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಭಾವನೆಗಳ ಮತ್ತು ಆಲೋಚನೆಗಳ ಪರಿಶುದ್ಧತೆ ಯಾವಾಗಲೂ ಹರುಷ, ಶಾಂತಿ ಮತ್ತು ಘನತೆಯನ್ನು, ನಾವು ಹಂಚಿಕೊಳ್ಳುವ ಪ್ರತಿ ಕ್ಷಣಕ್ಕೂ ತರುತ್ತದೆ.
- ಜೀವನದ ಕೊಡುಗೆಗಳಾದ ಸಂಗೀತ, ಸೂರ್ಯಾಸ್ತಗಳು ಹಾಗೂ ಪ್ರೀತಿಯನ್ನು ನಿರಾಕರಿಸುವುದು ಆಧ್ಯಾತ್ಮಿಕತೆಯಲ್ಲ. ಜೀವನವನ್ನು ಪೂರ್ಣವಾಗಿ ಜೀವಿಸುವುದು, ಸೌಂದರ್ಯವನ್ನು ಅನುಭವಿಸುವುದು ಮತ್ತು ಅದರಲ್ಲಿ ದೇವರನ್ನು ಕಾಣುವುದು ಆಧ್ಯಾತ್ಮಿಕತೆ.
- ಧ್ಯಾನ ಮಾಡಿದಾಗ ನಮ್ಮ ಮೆದುಳಿನ ಸಾಮರ್ಥ್ಯ ವರ್ಧಿಸುತ್ತದೆ, ಹೆಚ್ಚು ಮೆದುಳಿನ ಕೋಶಗಳು ತೆರೆದುಕೊಳ್ಳುತ್ತವೆ.
- ನಾವು ನಿಜವಾಗಿಯೂ ವಿನೀತರಾದಾಗ, ದೇವರು ನಮ್ಮ ಮೂಲಕ ಕಾರ್ಯ ನಡೆಸುತ್ತಾನೆ. ನಮಗೆ ಯಾವಾಗಲೂ ರಕ್ಷಣೆ ಮತ್ತು ಮಾರ್ಗದರ್ಶನ ಸಿಗುತ್ತದೆ.
- ಭಾವವಶರಾಗಿರುವುದು ಮಾನವೀಯ ಹಾಗೂ ಸ್ವಾಭಾವಿಕ. ಅದು ದುರ್ಬಲತೆಯ ಲಕ್ಷಣವಲ್ಲ. ನಮ್ಮ ಭಾವನೆಗಳು, ನಮ್ಮ ಅಭಿಪ್ರಾಯ ಮತ್ತು ಕೃತ್ಯಗಳ ಮೇಲೆ ಪರಿಣಾಮ ಬೀರಿದಾಗ, ಅದು ದುರ್ಬಲತೆಯಾಗುತ್ತದೆ.
- ನಕಾರಾತ್ಮಕತೆಯನ್ನು ನಿಭಾಯಿಸಲು, ಮೊದಲು ನಾವು ಅದನ್ನು ಗುರುತಿಸಬೇಕು, ನಂತರ ನಮ್ಮದಲ್ಲವೆಂದು ನಿರಾಕರಿಸಿ ತಿರಸ್ಕರಿಸಬೇಕು ಹಾಗೂ ಹೊರದೂಡಬೇಕು. ನಾವು ಜಾಗ್ರತೆಯಾಗಿದ್ದರೆ ಇದು ಸಾಧ್ಯ.
- ಸ್ವಾಭಾವಿಕವಾಗಿ, ಜನ್ಮತಃ, ನಾವು ಸಂಪೂರ್ಣವಾಗಿ, ನಿಚ್ಚಳವಾಗಿ ಸಕಾರಾತ್ಮಕ ಗುಣವುಳ್ಳವರು ಎನ್ನುವುದನ್ನು ನಾವು ಅರಿಯಬೇಕು. ಈ ಅರಿವೆಯೇ ನಮಗೆ ಬಲ ನೀಡುತ್ತದೆ ಮತ್ತು ರಕ್ಷಾ ಕವಚವಾಗಿ ಕೆಲಸ ಮಾಡುತ್ತದೆ. ನಕಾರಾತ್ಮಕತೆ ನಮ್ಮನ್ನು ತಟ್ಟುವುದಿಲ್ಲ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4920 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.07 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕನ್ನು ಆಯ್ದುಕೊಳ್ಳುವುದು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

29 ವರ್ಷಗಳ ನಂತರ ನನ್ನ ಬಾಲ್ಯ ಸ್ನೇಹಿತನನ್ನು ಇತ್ತೀಚೆಗೆ ಭೇಟಿ ಮಾಡಿದೆ! ನಿರ್ಮಲವೂ ಪ್ರಶಾಂತವೂ ಆದ ಊರಿನ ಹೊರವಲಯಕ್ಕೆ ಹೋಗಿ ನಾವು ಸೂರ್ಯಾಸ್ತವನ್ನು ಆನಂದಿಸುತ್ತಿದ್ದ ಆ ಹಿಂದಿನ ಶುದ್ಧವಾದ ಹಳ್ಳಿಯ ಜೀವನಕ್ಕೆ ನೆನಪುಗಳು ನಮ್ಮನ್ನು ಕೊಂಡೊಯ್ದುವು. ಭ್ರಷ್ಟಾಚಾರದಿಂದ ತುಂಬಿದ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೂ ಕೂಡ ಭ್ರಷ್ಟಾಚಾರ ಅವನನ್ನು ಮುಟ್ಟದಿರುವುದನ್ನು ತಿಳಿದು ನನಗೆ ಹೃದಯತುಂಬಿ ಬಂತು. ಉನ್ನತ ಹುದ್ದೆಗಳಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಕೂಡ ಅವನಿಗೆ ತನ್ನದೇ ಆದ ಒಂದು ಮನೆ ಅಥವಾ ಫ್ಲ್ಯಾಟ್ ಕೊಂಡುಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಆ ಇಲಾಖೆಯಲ್ಲೇ ಅವನೊಬ್ಬ ಅತಿ ಅಪರೂಪದ ಅಧಿಕಾರಿಯಾಗಿರಬೇಕು.

ಅಂತಹ ವ್ಯಕ್ತಿಗಳಲ್ಲಿ ಹೊಸಯುಗದ ಕನಸು ತನ್ನನ್ನು ಜೀವಂತವಾಗಿ ಉಳಿಸಿಕೊಳ್ಳುತ್ತದೆ. ಪ್ರಾಮಾಣಿಕತೆ, ಒಳ್ಳೆಯತನ ಮತ್ತು ಶಾಂತಿಯನ್ನು ಚಾನಲ್ ಮಾಡುವ ಈ ಅಪರಿಚಿತ ಬೆಳಕಿನ ಚಾನಲ್‌ಗಳ ಮೂಲಕ ಬೆಳಕು ಪ್ರಕಾಶಿಸುತ್ತದೆ. ಅವರು ಪ್ರಜ್ಞಾಪೂರ್ವಕವಾಗಿ ಈ ಮೌಲ್ಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಹಾಗೂ ಇವುಗಳನ್ನು ಆಯ್ಕೆಮಾಡಿಕೊಳ್ಳುವುದರ ಮೂಲಕ ಬೆಳಕನ್ನು ಆಯ್ಕೆಮಾಡಿಕೊಳ್ಳುತ್ತಾರೆ.

ಅಂತಹ ವ್ಯಕ್ತಿಗಳಿದ್ದಾರೆ! ಅವರು ಬೆಳಕನ್ನು ತಮ್ಮ ಜೀವನದಲ್ಲಿ ಸದ್ದಿಲ್ಲದೆ ವ್ಯಕ್ತಪಡಿಸುತ್ತಾರೆ.

ಈ ಪ್ರಪಂಚದ ಭವಿಷ್ಯ ಭವ್ಯವಾಗಿದೆ ಎಂದು ಅಂತಹ ಚಾನಲ್‌ಗಳ ಮೂಲಕ ಬೆಳಕು ನಮಗೆ ಭರವಸೆಯನ್ನು ನೀಡುತ್ತದೆ. ನನ್ನ ಸ್ನೇಹಿತ ಮಾತ್ರವಲ್ಲದೆ ನನಗೆ ತಿಳಿದ ಇನ್ನೂ ಹಲವರು ಪರಿಶುದ್ಧವಾದ ಮೌಲ್ಯಾಧಾರಿತ ಜೀವನವನ್ನು ನಡೆಸುತ್ತಿದ್ದಾರೆ. ಭ್ರಷ್ಟಾಚಾರದ ಮೂಲಕ ಸುಲಭವಾಗಿ ಹಣಗಳಿಸುವ ಅನೇಕ ಅವಕಾಶಗಳಿದ್ದಾಗಲೂ ಕೂಡ ಈ ವ್ಯಕ್ತಿಗಳು ತಮ್ಮನ್ನು ಪರಿಶುದ್ಧವಾಗಿ ಇಟ್ಟುಕೊಂಡು ಮೌಲ್ಯಗಳ ಬಗ್ಗೆ ಅವರಿಗಿರುವ ಬದ್ಧತೆಯ ಅತಿ ಕಷ್ಟಕರವಾದ ಪರೀಕ್ಷೆಗಳನ್ನು ಪಾಸುಮಾಡಿದ್ದಾರೆ. ವಿವಿಧ ರೀತಿಯ ಸವಲತ್ತುಗಳನ್ನು ಸ್ವೀಕರಿಸುವಂತೆ ಅನೇಕ ಕಡೆಗಳಿಂದ ಬರುವ ಒತ್ತಡಗಳ ವಿರುದ್ಧ ಕೂಡ ಅವರು ಹೋರಾಡಬೇಕಾಗಿದೆ.

ಅಂತಹ ವ್ಯಕ್ತಿಗಳ ಬಗ್ಗೆ ಈ ಪ್ರಪಂಚಕ್ಕೆ ಗೊತ್ತಾಗುವುದೇ ಇಲ್ಲ. ಆದರೆ ಅವರು ಹೊಸಯುಗದ ಅಡಿಪಾಯವಾಗುತ್ತಾರೆ. ಅವರ ಜೀವನ ಅವರ ಸುತ್ತ ಇರುವ ಇತರರನ್ನು ಮುಟ್ಟಿ ಶುದ್ಧವಾದ ಜೀವನವನ್ನು ನಡೆಸುವಂತೆ ಅವರನ್ನು ಪ್ರೋತ್ಸಾಹಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಅನೇಕರು ಸೇರಿ ಮೌಲ್ಯಾಧಾರಿತ ಜೀವನವನ್ನು ನಡೆಸಲು ಪ್ರಾರಂಭಿಸಿದಾಗ ನಾವು ಹೊಸಯುಗದಲ್ಲಿ ಇರುತ್ತೇವೆ. ಆಗ, ಅನೇಕ ಕೊಡುಗೆಗಳನ್ನು ನೀಡಲು ಕಾಯುತ್ತಿರುವ ಆ ದೇವರು, ನಕಾರಾತ್ಮಕತೆಗೆ ಅವಕಾಶವಿಲ್ಲದ, ಪರಿಪೂರ್ಣವಾದ ಹೊಸಯುಗವನ್ನು ನಮಗೆ ಕೊಡುಗೆಯಾಗಿ ನೀಡುತ್ತಾನೆ.

ಹೊಸಯುಗದಲ್ಲಿ ರಾಷ್ಟ್ರಗಳ ನಡುವೆ ಗಡಿರೇಖೆ ಇರುವುದಿಲ್ಲ. ಇಡೀ ಪ್ರಪಂಚ ಒಂದೇ ಆಗಿರುತ್ತದೆ. ಲೌಕಿಕ ಹಾಗೂ ಅಲೌಕಿಕ ಸಂಪತ್ತು ಹೇರಳವಾಗಿರುತ್ತದೆ. ಯಾವ ಷರತ್ತೂ ಇಲ್ಲದೆ ಪ್ರೀತಿಸುವಂಥ ಉನ್ನತ ಆಧ್ಯಾತ್ಮಿಕ ಸಾಮರ್ಥ್ಯದ ಮಟ್ಟಕ್ಕೆ ಮನುಷ್ಯ ತಲುಪುತ್ತಾನೆ. ಮನುಷ್ಯರು ಇತರರೊಡನೆ ಹಾಗೂ ಪ್ರಕೃತಿಯೊಡನೆ ಪರಿಪೂರ್ಣ ಸಾಮರಸ್ಯದಿಂದ ಜೀವಿಸುತ್ತಾರೆ. ಜನರ ನಡುವೆ ಸಾಮರಸ್ಯವಿದ್ದಾಗ ಹಾಗೂ ಪ್ರಕೃತಿಯೊಡನೆ ಸಾಮರಸ್ಯದಿಂದ ಬಾಳಿದಾಗ, ಪ್ರಕೃತಿಯೂ ಸಹ ಪ್ರತಿಯಾಗಿ ಪ್ರೀತಿಯನ್ನು ನೀಡುತ್ತದೆ. ಹಾಗೂ ಪ್ರವಾಹ, ಭೂಕಂಪ, ಪ್ರಕೃತಿ ವಿಕೋಪಗಳು ಇರುವುದಿಲ್ಲವೆಂದು ಗುರೂಜಿಯವರು ನಮಗೆ ವಿವರಿಸಿದ್ದರು.

ಎಷ್ಟು ಬೇಗ ನಾವು ಅಂತಹ ಭವಿಷ್ಯದೆಡೆಗೆ ಸಾಗುತ್ತೇವೆ ಎನ್ನುವುದು ನಮ್ಮ ಕೈಗಳಲ್ಲೇ ಇದೆ. ಬಹು ಬೇಗ ನಾವು ಬೆಳಕನ್ನು ಆಯ್ಕೆಮಾಡಿಕೊಂಡಿದ್ದೇ ಆದರೆ ಶಾಂತಿ ಮತ್ತು ಪರಿಪೂರ್ಣತೆಯ ಹೊಸಯುಗವನ್ನು ಬಹು ಬೇಗ ಪ್ರವೇಶಿಸುತ್ತೇವೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

**ಸೋಲಾಪೂರ್**

ಸೋಮವಾರ ಮತ್ತು ಗುರುವಾರ
(ಸಂಜೆ 7:00 - 7:15)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

**ಚೆನ್ನೈ**

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

**ಪುಣೆ**

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್



ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

**ವಿಶಾಖಪಟ್ಟಣ**


ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

**ಮೀರಜ್**

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್






## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ವಿಶ್ವ ಲೈಟ್ ಚಾನಲ್ಸ್ ದಿನಕ್ಕಾಗಿ ಶಾಲೆಗಳಿಗೆ ಹೋಗಬೇಕಾಗಿ ಬಂದಾಗ, ಪ್ರತಿ ಸಲದಂತೆ ನಾನು ತುಂಬಾ ಆತಂಕಗೊಂಡಿದ್ದೆ. ತಕ್ಷಣ ನನಗೊಂದು ವಿಚಾರ ಹೊಳೆಯಿತು – "ನೀನು ಬಿಟ್ಟುಕೊಡಬೇಕು. ನೀನು ದಾರಿಗೆ ತುಂಬಾ ಅಡ್ಡಬರುತ್ತಿದ್ದೀಯ. ಈ ವಿಷಯದಲ್ಲಿ ಮಾತ್ರವಲ್ಲ, ಜೀವನದ ಪ್ರತಿ ವಿಷಯದಲ್ಲೂ ನೀನು ಬಿಟ್ಟುಕೊಡಬೇಕು". ಆದಕಾರಣ ನಾನು 'ಬಿಟ್ಟುಕೊಡಲು' ನಿರ್ಧರಿಸಿದೆ. ವಿಶ್ವ ಲೈಟ್ ಚಾನಲ್ಸ್ ದಿನಕ್ಕೆ ಮುಂಚೆ ಶಾಲೆಗಳು ನಮ್ಮನ್ನು ಆತ್ಮೀಯತೆಯಿಂದ ಬರಮಾಡಿಕೊಂಡು ಸೆಷನ್‌ಗಳನ್ನು ನಡೆಸುವುದಕ್ಕೆ ಸಂತೋಷದಿಂದ ಒಪ್ಪಿಗೆ ನೀಡಿದವು. ಸಮಯ ಹೊಂದಿಕೆಯಾಗದಿದ್ದಾಗ ಶಾಲೆಯೊಂದರ ಪ್ರಾಂಶುಪಾಲರು ಬೇರೆ ಸಮಯವನ್ನು ಕೂಡಲೇ ನೀಡಿದರು. ಲೈಟ್ ಚಾನಲಿಂಗ್ ಅಭ್ಯಾಸವನ್ನು ಹೇಗೆ ನಿಯತಗೊಳಿಸಬಹುದೆಂದು ತಿಳಿಯಲು ಕೂಡ ಅವರು ಉತ್ಸುಕರಾಗಿದ್ದರು.

ವಿಶ್ವ ಲೈಟ್ ಚಾನಲ್ಸ್ ದಿನದಂದು ನನ್ನಲ್ಲಿ ಕೆಮ್ಮು ಹೆಚ್ಚಾಗಿತ್ತು. ಆದರೆ ಪ್ರತಿಯೊಂದು ಶಾಲೆಯಲ್ಲೂ ನಾನು ಮಾತನಾಡುವುದಕ್ಕೆ ನಿಂತುಕೊಳ್ಳುತ್ತಿದ್ದಂತೆ, ಲೈಟ್ ಚಾನಲಿಂಗ್ ಸೆಷನ್‌ಅನ್ನು ನಾವು ಮುಗಿಸುವ ವರೆಗೂ ನನ್ನ ಕೆಮ್ಮು ಮಾಯವಾಗುತ್ತಿತ್ತು! ನಂತರ ಪುನಃ ಕೆಮ್ಮು ಶುರುವಾಗುತ್ತಿತು! ಎಲ್ಲವೂ ವೈಶಿಷ್ಟ್ಯಪೂರ್ಣವಾಗಿತ್ತು ಹಾಗೂ ಎಲ್ಲಾ ಸೆಷನ್‌ಗಳು ಬಹಳ ಚೆನ್ನಾಗಿ ನಡೆದವು. ಇಡೀ ದಿನ ನನಗೆ ಹಸಿವಾಗಲಿಲ್ಲ, ಯಾವುದೇ ರೀತಿಯ ಆಯಾಸವೂ ಆಗಲಿಲ್ಲ. ಚಾನಲಿಂಗ್ ಸಮಯದಲ್ಲಿ ನಮ್ಮ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಹರಿದ ಬೆಳಕಿನಿಂದಾಗಿ ನಾನು ತುಂಬಾ ಉಲ್ಲಾಸ ಭರಿತನಾಗಿದ್ದೆ. ಬಹುಶಃ ನಾನೇ ಬಹಳಷ್ಟು ಕೆಲಸವನ್ನು ಮಾಡಲು ಪ್ರಯತ್ನಿಸಿದ್ದರೆ ಇದು ಸಾಧ್ಯವಾಗು ತ್ತಿರಲಿಲ್ಲ. ಆದರೆ "ಬಿಟ್ಟುಕೊಡು" ಎನ್ನುವುದು ತುಂಬ ಚೆನ್ನಾಗಿ ಕೆಲಸ ಮಾಡಿತು. ನನಗೆ ಮತ್ತು ನನ್ನ ತಂಡದ ಸದಸ್ಯರಿಗೆ ಆ ದಿನ ಸುಂದರವಾಗಿತ್ತು.

–ಸುನಿಲ್ ಬಿಸರಹಳ್ಳಿ, ಕಾರ್ಯಕರ್ತ

ನಮ್ಮ ಪರೀಕ್ಷೆಗಳು ಹತ್ತಿರ ಬರುತ್ತಿದ್ದಂತೆ, ನಾವೆಲ್ಲಾ ಒತ್ತಡಕ್ಕೆ ಒಳಗಾಗಿದ್ದೆವು. ಆ ಸಮಯದಲ್ಲಿ ನಮ್ಮ ಕಾಲೇಜಿನಲ್ಲಿ ಲೈಟ್ ಚಾನಲಿಂಗ್ ಸೆಷನ್‌ಅನ್ನು ಆಯೋಜಿಸಲಾಗಿತ್ತು. ಆ ಸೆಷನ್‌ನಲ್ಲಿ ಭಾಗವಹಿಸಿದ ನಮಗೆ ಬಹಳ ಸಂತೋಷ, ಸಮಾಧಾನ ಮತ್ತು ಪರಿಶುದ್ಧತೆಯ ಅನುಭವವಾಯಿತು.

ವೈಯಕ್ತಿಕವಾಗಿ, ನನಗೆ ಒಂದು ಸುಂದರವಾದ ಅನುಭವವಾಯಿತು. ನನಗೆ ಸ್ವಲ್ಪವೂ ಆತ್ಮ ವಿಶ್ವಾಸವಿರಲಿಲ್ಲ. ನನ್ನ ಮನಸ್ಸು ಬಹಳಷ್ಟು ಯೋಚನೆಗಳಿಂದ ತುಂಬಿಕೊಂಡು ಗೊಂದಲಗಳ ಗೂಡಾಗಿತ್ತು. ಆದರೆ ನಾನು ಲೈಟ್ ಚಾನಲಿಂಗ್ ಮಾಡಿದಾಗ, ಪ್ರಪ್ರಥಮ ಬಾರಿಗೆ, ಸಂಪೂರ್ಣ ಸಮಾಧಾನದ ಅನುಭವ ನನಗಾಯಿತು. ನನ್ನ ಮನಸ್ಸು ಸಕಾರಾತ್ಮಕ ಚಿಂತನೆಗಳಿಂದ ತುಂಬಿಕೊಂಡಿತು. ನಾನು ಚೆನ್ನಾಗಿ ಓದಬಲ್ಲೆ ಹಾಗೂ ಪರೀಕ್ಷೆಗಳಲ್ಲಿ ಚೆನ್ನಾಗಿ ಬರೆಯಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿದೆ. ನಮಗೆ ಇಂಥ ಅದ್ಭುತವಾದ ತಂತ್ರವನ್ನು ಕಲಿಸಿಕೊಟ್ಟಿದ್ದಕ್ಕಾಗಿ ನಿಮಗೆ ವಂದನೆಗಳು.

–ಪ್ರಣಿತಾ ಕಾರ್ವೆ ಟಿ ವೈ, ಬಿಸಿಎ, ಬ್ಯಾಚೆಲರ್ ಅಫ್ ಕಂಪ್ಯೂಟರ್ ಅಪ್ಲಿಕೇಶನ್ಸ್ ಕಾಲೇಜ್, ಕಮ್ಮಿನ್ಸ್ ಕಾಲೇಜ್ ಕ್ಯಾಂಪಸ್, ಪುಣೆ

"ಈ ಲೈಟ್ ಚಾನಲಿಂಗ್ ತಂತ್ರ ಬಹಳ ಪ್ರಭಾವಶಾಲಿ ಮತ್ತು ವಿಶ್ರಾಂತಿದಾಯಕವಾಗಿದೆ. ನಾನು ಸಂತೋಷದಿಂದ ಇದ್ದೇನೆ. ಇದಕ್ಕಾಗಿ ನನ್ನ ಕೃತಜ್ಞತೆಗಳು" ಎಂದು ಉತ್ತರಹಳ್ಳಿಯಲ್ಲಿರುವ ವಿಶ್ವ ಭಾರತಿ ಸ್ಕೂಲ್ ಮತ್ತು ಕಾಲೇಜಿನ ಪ್ರಾಂಶುಪಾಲರು, ವಿಶ್ವ ಲೈಟ್ ಚಾನಲ್ಸ್ ದಿನದಂದು ತಮ್ಮ ಅನುಭವವನ್ನು ಹಂಚಿಕೊಂಡರು.

"ಲೈಟ್ ಚಾನಲಿಂಗ್ ಸೆಷನ್ ಮುಗಿದ ನಂತರ ನನಗೆ ಬಹಳ ಶಾಂತಿ ಮತ್ತು ಸಂತೋಷದ ಅನುಭವ ವಾಯಿತು. ನಮ್ಮ ಜೀವನದಲ್ಲಿ ಇಂತಹ ತಂತ್ರದ ಅವಶ್ಯಕತೆಯಿದೆ. ಪ್ರತಿ ದಿನ ನಾವು ಇದನ್ನು ಅಭ್ಯಾಸ ಮಾಡುತ್ತೇವೆ" ಎಂದು ಡಿಗ್ರಿ ಕಾಲೇಜಿನ ಪ್ರಾಂಶು ಪಾಲರು ಹೇಳಿದರು.

ಚಿಕ್ಕಲಸಂದ್ರದಲ್ಲಿನ ಎಸ್ ವಿ ಎಸ್ ಇ–ಟೆಕ್ನೋ ಸ್ಕೂಲ್‌ಅನ್ನು ತಮ್ಮ ಮೂರು ಹೆಣ್ಣು ಮಕ್ಕಳೊಂದಿಗೆ ಒಬ್ಬ ತಂದೆ ಪ್ರಾಮಾಣಿಕತೆ ಮತ್ತು ಸಮರ್ಪಣಾ ಮನೋಭಾವದಿಂದ ನಡೆಸುತ್ತಿದ್ದಾರೆ. ಶಾಲೆಯಲ್ಲಿ ಅನಿರೀಕ್ಷಿತ ಪರಿಶೀಲನಾ ಕಾರ್ಯ ನಡೆಯುತ್ತಿದ್ದರೂ ಕೂಡ, ಲೈಟ್ ಚಾನಲಿಂಗ್ ಸೆಷನ್‌ಅನ್ನು ಸಮಾಧಾನ ವಾಗಿ ನಿಗದಿತ ಸಮಯಕ್ಕೆ ಸರಿಯಾಗಿ ಆಯೋಜಿಸಿ ದ್ದರು. "ಸೆಷನ್ ಸಮಯದಲ್ಲಿ ಹಾಗೂ ಕಾರ್ಯ ಕರ್ತರಲ್ಲಿ ಶಾಂತಿ ಮತ್ತು ಪ್ರೀತಿ ಇರುವುದರ ಅನುಭವ ನಮಗಾಯಿತು" ಎಂದು ಒಬ್ಬ ಮಗಳು ಹೇಳಿದರು.

ಸೆಷನ್‌ಗಳು ಅದ್ಭುತವಾಗಿದ್ದವು. ಇಡೀ ಸೆಷನ್‌ನಲ್ಲಿ ಶಾಂತಿ ಮತ್ತು ಕಂಪನಗಳು ಎಲ್ಲೆಡೆ ತುಂಬಿದಂತೆ ನನಗೆ ಅನ್ನಿಸಿತ್ತು. ಆ ದಿನದ ಕೊನೆಗೆ ಮಾಷ್ಟರ್‌ಗಳಿಗೆ ಕೃತಜ್ಞತೆಗಳನ್ನು ಅರ್ಪಿಸಲು ನಾನು ಕಣ್ಣು ಮುಚ್ಚಿ ಕುಳಿತಾಗ ಆ ದಿನದ ಕ್ಷಣಿಕ ದರ್ಶನದ ಒಂದು ಚಿತ್ರವನ್ನು ನೋಡಿದೆ. ಅದರಲ್ಲಿ ನಮ್ಮ ಕಾರ್ಯಕರ್ತರನ್ನು ಪ್ರತಿನಿಧಿಸುತ್ತಿದ್ದ ಶ್ವೇತ ವರ್ಣದ ದೇವತೆಗಳು ಬೆಳಕನ್ನು ಹೊತ್ತು ಎಲ್ಲೆಡೆ ಹಾರಾಡು ತ್ತಿದ್ದರು. ವಿಶ್ವಶಾಂತಿಗಾಗಿ ಬೆಳಕನ್ನು ಸ್ವೀಕರಿಸಿ ಜೊತೆಯಲ್ಲಿ ಹರಡಲು ಮುದ್ದಾದ ಆ ಮುಗ್ಧ ಮಕ್ಕಳು ಶ್ವೇತ ವರ್ಣದ ದೇವತೆಗಳನ್ನು ಸ್ವಾಗತಿಸುತ್ತಿದ್ದರು.

ಆ ದಿನದಂದು ಸಮಯ ಬೇಗ ಕಳೆದರೂ, ಚೈತನ್ಯ, ಆಶೀರ್ವಾದ, ಮತ್ತು ಮಾಷ್ಟರುಗಳ ಅನುಗ್ರಹಗಳು ಅಗಾಧವಾಗಿ ಸುರಿದವು.

–ಅನಿತಾ ಕೆ ಎ, ಕಾರ್ಯಕರ್ತರು

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ